# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. : 1013
ಮಾನ್ಯ ಸದಸ್ಯರ ಹೆಸರು : ಶ್ರೀ ರಾಜೇಂದ್ರ ರಾಜಣ್ಣ
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 18-12-2024
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆಶಿಪ್ ನಿರ್ಮಾಣ ಮಾಡಿರುವ ತುಮಕೂರು-ಮಧುಗಿರಿ-ಪಾವಗಡ ರಸ್ತೆಯಲ್ಲಿ ನಡೆದ ಅಪಘಾತ ಪ್ರಕರಣಗಳ ಸಂಖ್ಯೆ ಎಷ್ಟು; ಮೃತಪಟ್ಟಿರುವವರ ಸಂಖ್ಯೆ ಎಷ್ಟು; (ಕಳೆದ 5 ವರ್ಷಗಳ ಮಾಹಿತಿ ನೀಡುವುದು) | ತುಮಕೂರು-ಮಧುಗಿರಿ-ಪಾವಗಡ ರಸ್ತೆಯಲ್ಲಿ ಕಳೆದ 5 ವರ್ಷಗಳಲ್ಲಿ ಒಟ್ಟಾರೆ 312 ಅಪಘಾತಗಳು ಸಂಭವಿಸಿದ್ದು, 19 ಜನ ಮೃತಪಟ್ಟಿರುತ್ತಾರೆ. ಅಪಘಾತ ಅಂಕಿ-ಅಂಶಗಳ ಕಳೆದ 5 ವರ್ಷಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ತುಮಕೂರು-ಮಧುಗಿರಿ-ಪಾವಗಡ ರಸ್ತೆಯಲ್ಲಿ ಅಪಘಾತ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾರಣಗಳೇನು; | ತುಮಕೂರು-ಮಧುಗಿರಿ-ಪಾವಗಡ ರಸ್ತೆ ನಿರ್ಮಾಣ ಕಾಮಗಾರಿಯು 2018 ರಲ್ಲಿ ಪೂರ್ಣಗೊಂಡಿರುತ್ತದೆ. ಸದರಿ ರಸ್ತೆ ನಿರ್ಮಿಸಿದ ನಂತರ ಅಪಘಾತಗಳ ಸಂಖ್ಯೆ ಹಾಗೂ ಅಪಘಾತಗಳಿಂದ ಮರಣಹೊಂದಿರುವವರ ಸಂಖ್ಯೆ ಕಡಿಮೆ ಆಗಿರುತ್ತದೆ. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.<br>ಸದರಿ ರಸ್ತೆ ನಿರ್ಮಿಸಿದ ನಂತರ ಕಳೆದ ಐದು ವರ್ಷಗಳಲ್ಲಿ ಸಂಭವಿಸಿರುವ ಅಪಘಾತಗಳು ಬಹುತೇಕವಾಗಿ ಅತಿ ವೇಗದ ವಾಹನ ಚಾಲನೆ, ಯಾಂತ್ರಿಕ ದೋಷಗಳು, ಮಧ್ಯಪಾನ ಮಾಡಿ ವಾಹನ ಚಾಲನೆ, ವಾಹನ ಚಾಲಕರ ಅಜಾಗರೂಕತೆ, ತಪ್ಪಾದ ಕ್ರಮದಲ್ಲಿ ವಾಹನ ಹಿಂದಿಕ್ಕುವುದು ಹಾಗೂ ಸರಿಯಾದ ಕ್ರಮದಲ್ಲಿ ವಾಹನಗಳ ತಿರುವು ತೆಗೆದುಕೊಳ್ಳಲು ವಿಫಲತೆ ಮುಂತಾದ ಕಾರಣಗಳಿಂದ ಸಂಭವಿಸಿರುತ್ತವೆ ಎಂದು ಇಂಡಿಪೆಂಡೆಂಟ್ ಇಂಜಿನಿಯರ್ ರವರು ನೀಡಿರುವ ಅಂಕಿ-ಅಂಶಗಳಿಂದ ತಿಳಿದು ಬಂದಿರುತ್ತದೆ.<br>ರಸ್ತೆಯ ತಾಂತ್ರಿಕ ದೋಷಗಳಿಂದ ಯಾವುದೇ ಅಪಘಾತಗಳು ಸಂಭವಿಸಿರುವುದಿಲ್ಲ. |
| ಇ) | ಹಾಗಿದ್ದಲ್ಲಿ, ಅಪಘಾತ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಕೈಗೊಂಡಿದೆ? | ಸದರಿ ರಸ್ತೆಯಲ್ಲಿ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ವತಿಯಿಂದ ಸದರಿ ರಸ್ತೆಯಲ್ಲಿ ಅವಶ್ಯಕತೆಯಿರುವ ಕಡೆಗಳಲ್ಲಿ ವಿದ್ಯುತ್‌ದೀಪಗಳು, ಸೂಚನಾ ಫಲಕಗಳು, ಸೋಲಾರ್ ಬ್ಲಿಂಕರ್ಸ್, ರಂಬಲ್ ಸ್ಟ್ರಿಪ್ಸ್, ರೋಡ್ ಮಾರ್ಕಿಂಗ್, ವೈಜ್ಞಾನಿಕ ಹಂಪ್ಸ್‌ಗಳು ಮತ್ತು Raised Pedestrian Crossing ಗಳನ್ನು ಅಳವಡಿಸಿ ರಸ್ತೆಯನ್ನು IRC ಮಾನದಂಡಗಳಾನುಸಾರ ನಿರ್ಮಿಸಲಾಗಿರುತ್ತದೆ. |

ಸಂಖ್ಯೆ. ಲೋಇ E-322 ಇಎಪಿ 2024

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ - 1

**Design, Build, Finance, Operate, Maintain and Transfer (DBFOMT) of Existing State Highway (SH 3 & SH 33) from Malavalli to Pavagada (Approx. length 193.344 Kms) in the State of Karnataka on DBFOMT Annuity.**

**Yearwise Accident Trends (Tumkur to Pavagada)**

| Year | Total No of Accidents | Minor Injury (no. of persons involved) | Major Injury (no. of persons involved) | Fatal (no. of persons involved) | Non Injury |
|---|---|---|---|---|---|
| 2020-21 | 76 | 62 | 18 | 5 | 0 |
| 2021-22 | 96 | 73 | 63 | 6 | 10 |
| 2022-23 | 57 | 61 | 24 | 1 | 5 |
| 2023-24 | 62 | 50 | 30 | 1 | 4 |
| 2024-25 (up to November-2024) | 21 | 20 | 3 | 6 | 0 |
| TOTAL | 312 | 266 | 138 | 19 | 19 |

PROJECT DIRECTOR
P.I.U., K.S.H.I.P.,
K. R. Circle, Bangalore - 1.

ಅನುಬಂಧ- ೨

**Design, Build, Finance, Operate, Maintain and Transfer (DBFOMT) of Existing State Highway (SH 3 & SH 33) from Malavalli to Pavagada (Approx. length 193.344 Kms) in the State of Karnataka on DBFOMT Annuity.**

| Sr.no | Yearwise Accident Trends (Tumkur to Pavagada) | | | |
|---|---|---|---|---|
| | Year | Total No of Accidents | Fatal (no. of persons involved) | Remarks |
| 1 | 2009-2014 | 363 | 125 | Causes of the accidents are over speed and careless driving as per police department report |
| 2 | 2014-2018 | 459 | 182 | |